ಇಂದು ದಿಃ04.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಬಿ.ಜಿ.ಕೆ. ವಕೀಲರಿಂದಃ**

ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಬಗ್ಗೆ ನನ್ನ ಅಣ್ಣ ಮುನೀರ್ ಅಹಮ್ಮದ್ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ನನ್ನ ಅಣ್ಣನೂ ಸಹ ಅಪಘಾತವಾದ ಸ್ಥಳದಲ್ಲಿರಲಿಲ್ಲ. 5 ನೇ ಅರ್ಜಿದಾರರು ಮೃತ ವ್ಯಕ್ತಿಯ ತಂದೆ ಎಂದರೆ ಸರಿ. ಶಾಜೀದ್ ಅಹಮ್ಮದ್ ನನ್ನ ಚಿಕ್ಕಪ್ಪ. ಅಪಘಾತವಾದ ಸಮಯದಲ್ಲಿ ನನ್ನ ಯಜಮಾನರು ಕಾರು ವಾಹನ ಓಡಿಸುತ್ತಿದ್ದರು ಎಂದರೆ ಸರಿ ಮೃತ ನನ್ನ ಗಂಡ ಮತ್ತು ಅವರ ತಮ್ಮ ಮುಜಾಯಿನ್ ಷರೀಫ್ ಇಬ್ಬರು ವೃತ್ತಿಯಲ್ಲಿ ಕ್ಯಾಂಟರ್ ಚಾಲಕರಾಗಿದ್ದರು ಎಂದರೆ ಸರಿ. ಅಪಘಾತವಾದ ದಿನ ಕಾರಿನಲ್ಲಿ ಎಷ್ಟು ಜನರು ಇದ್ದರು ಎಂದು ಗೊತ್ತಿಲ್ಲ. ಅಪಘಾತವಾದ ದಿನ ಕಾರಿನಲ್ಲಿ 5 ಜನ ಇದ್ದರು ಎಂದರೆ ಗೊತ್ತಿಲ್ಲ ಮನೆಯಿಂದ ಹೋದಾಗ ಇಬ್ಬರು ಇದ್ದರು. ನನ್ನ ಗಂಡ ಕ್ಯಾಂಟರ್ ಚಾಲಕನಾಗಿದ್ದುದ್ದಲ್ಲದೇ ಹಳೆಯ ವಾಹನಗಳನ್ನು ಖರೀದಿಸಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಯ್ಯದ್ ಕಾಶೀಫ್ ನನ್ನ ಯಜಮಾನರ ಸ್ನೇಹಿತರಲ್ಲ. ಕಾರಿನಲ್ಲಿ ಹೋಗುತ್ತಿದ್ದ 5 ಜನರು ನನ್ನ ಯಜಮಾನರ ಸ್ನೇಹಿತರು ಎಂದರೆ ಸರಿಯಲ್ಲ ಒಬ್ಬರು ಸ್ನೇಹಿತರು. 4 ಮತ್ತು 5 ನೇ ಅರ್ಜಿದಾರರು ಮೊದಲು ನಮ್ಮ ಜೊತೆಯೇ ಇದ್ದರು ಇವಾಗ ನಮ್ಮ ಮನೆಯಲ್ಲಿ ಸ್ವಲ್ಪ ದಿವಸ ಮತ್ತು ಮಗಳ ಮನೆಯಲ್ಲಿ ಸ್ವಲ್ಪ ದಿವಸ ಇರುತ್ತಾರೆ. ನನ್ನ ಯಜಮಾನರ ಜನ್ಮ ದಿನಾಂಕ 30.07.1989 ಎಂದರೆ ಸರಿ. ನನ್ನ ಯಜಮಾನರು ಕಾರು ಚಾಲಕರಾಗಿ ಹೋಗುತ್ತಿರಲಿಲ್ಲ ಆದರೆ ಸ್ನೇಹಿತರ ಜೊತೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರನ್ನು ಆ ದಿನ ಕೆಲಸಕ್ಕೆ ಕಾಶೀಫ್ ಕೆಲಸಕ್ಕೆ

ಕರೆದುಕೊಂಡು ಹೋಗಿದ್ದರು. ನನ್ನ ಯಜಮಾನರು ಮತ್ತು ಕಾಶೀಫ್ ನಡುವೆ ಮಾಲೀಕರು ಮತ್ತು ಕಾರ್ಮಿಕ ಸಂಬಂಧವಿರಲಿಲ್ಲ ಎಂದರೆ ಸುಳ್ಳು. ನನ್ನ ಯಜಮಾನರು 1 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ 700/- ಕೂಲಿ ಕೊಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸದ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಯಜಮಾನರು ಕಾರ್ಮಿಕರಾಗಿ ಕೆಲಸ ಮಾಡುತ್ತಿರಲಿಲ್ಲ ಆದರೆ ಪರಿಹಾರ ಸಿಗಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಮತ್ತು ಚಿಕ್ಕಪ್ಪರವರ ಹೇಳಿಕೆ ಪ್ರಕಾರ ನನ್ನ ಗಂಡ ಕ್ಯಾಂಟರ್ ಚಾಲಕನಾಗಿದ್ದರೂ ಸಹ ಕಾರು ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ತನ್ನ ಕಾರು ಚಾಲಕರಿಗೆ ವಿಮೆ ಮಾಡಿಸಲು ಪ್ರೀಮಿಯಂ ಮೊತ್ತ ಕೊಟ್ಟಿಲ್ಲದ ಕಾರಣ 2 ನೇ ಎದುರುದಾರರು ನಮಗೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**